**ಓ.ಎಸ್ಃ 34/2021**

<u>ದಿನಾಂಕಃ 01.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

**<u>ಪಾಟಿ ಸವಾಲುಃ 14 ನೇ ಪ್ರತಿವಾದಿ ಪರ ಶ್ರೀ ಕೆ ಬಿ ವಕೀಲರಿಂದಃ</u>**

ಲೇಟ್ ಪರಮೇಶ್ವರಪ್ಪ ನನ್ನ ತಂದೆ. ಪಿ ಬಸವಣ್ಣ, ಲೇಟ್ ನಂದೀಶಪ್ಪ, ಪಿ ವಿರೂಪಾಕ್ಷಪ್ಪ ಮತ್ತು ಪಿ ಶಿವಕುಮಾರ ಎಂಬ 4 ಜನ ನನ್ನ ಸಹೋದರರು ಎಂದರೆ ಸರಿ. ನನಗೆ ನಾಗಮ್ಮ ಎಂಬ ಅಕ್ಕ ಇರುತ್ತಾರೆ. ನಾಗಮ್ಮನವರು ಮೃತಪಟ್ಟಿರುತ್ತಾರೆ. ನನ್ನ ತಂದೆ ಪರಮೇಶ್ವರಪ್ಪ ಮೃತಪಟ್ಟು ಸುಮಾರು 25 ವರ್ಷಗಳಾಗಿರುತ್ತದೆ. ನನ್ನ ತಂದೆ ಜೀವಿತ ಕಾಲದಲ್ಲಿ ನನ್ನ ಮದುವೆ ಆಗಿರುತ್ತದೆ ಎಂದರೆ ಸರಿ. ನನ್ನ ಮದುವೆ ಆಗಿ 35

ವರ್ಷಗಳಾಗಿರುತ್ತದೆ ಎಂದರೆ ಆಗಿರಬಹುದು. ಮದುವೆ ಆದ ನಂತರ ನಾನು ನನ್ನ ಗಂಡ ಪರಶಿವಮೂರ್ತಿ ರವರ ಜೊತೆ ವಾಸವಾಗಿರುತ್ತೇನೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಸಹೋದರರು ದಿಃ 20.12.1973 ರಂದು ಬಾಯಿಮಾತಿನ ಮೂಲಕ ನಮ್ಮ ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 100 ಎಕರೆ ಆಸ್ತಿಗಳಿಗೆ ನಾನು ದಾವೆ ಸಲ್ಲಿಸಿರುತ್ತೇನೆ. 1973 ರಲ್ಲಿ ಆದ ವಿಭಾಗದಂತೆ ಅವರವರ ಪಾಲಿಗೆ ಬಂದ ಆಸ್ತಿಗಳಿಗೆ ಸಂಬಂಧಿಸಿದಂತೆ ಖಾತೆಗಳು ಬದಲಾಗಿರುತ್ತವೆ ಎಂದರೆ ಸಾಕ್ಷಿಯು ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿಯರ ಹೆಸರು ನಮೂದಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆ ಜಮೀನುಗಳು ಜಾಸ್ತಿ ಇದ್ದುದರಿಂದ ಸ್ವಲ್ಪ ಜಮೀನಿನ ಖಾತೆಗಳನ್ನು ನನ್ನ ಸಹೋದರರ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪಹಣಿ ಪತ್ರಿಕೆಗಳಲ್ಲಿ ನನ್ನ ಸಹೋದರರಿಗೆ ವಿಭಾಗದ ಮೂಲಕ ಖಾತೆ ಬದಲಾವಣೆ ಮಾಡಲಾಗಿದೆ ಎಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರರು ಅವರ ಭಾಗಕ್ಕೆ ಬಂದ ಜಮೀನುಗಳನ್ನು ಬ್ಯಾಂಕಿಗೆ ಆಧಾರ ಮಾಡಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸಾಲ ಪಡೆದುಕೊಂಡು ಮರುಪಾವತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ನನ್ನ ಸಹೋದರರ ಜೊತೆ ಒಟ್ಟು ಕುಟುಂಬದ ಆಸ್ತಿಗಳನ್ನು ಜಂಟಿಯಾಗಿ ಅನುಭವಿಸುತ್ತಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರು ಪಿ ನಂದೀಶರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಸಹೋದರ ಪಿ ನಂದೀಶ್ ರವರ ಭಾಗಕ್ಕೆ ಬಂದ 4 ಆಸ್ತಿಗಳ ಮೇಲೆ ಮಾತ್ರ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಹೋದರ ಪಿ ನಂದೀಶ್ ರವರ ಭಾಗಕ್ಕೆ ಬಂದ ದಾವಾ ಆಸ್ತಿ ಸಂಖ್ಯೆ 3 ಸರ್ವೇ ನಂಬರ್ 70 ರಲ್ಲಿ 1 ಎಕರೆ 11 ಗುಂಟೆ ಜಮೀನನ್ನು ದಿಃ 27.11.2006 ರಂದು

14 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಖರ್ಚಿಗಾಗಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಸಹೋದರ ಪಿ ನಂದೀಶ್ ರವರು ದಾವಾ ಆಸ್ತಿ ಸಂಖ್ಯೆ 3 ಅನ್ನು ಮಾರಾಟ ಮಾಡಿದ ಬಗ್ಗೆ ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಹಿತಾಸಕ್ತಿಗಾಗಿ ಮಾರಾಟ ಮಾಡಿದ್ದರಿಂದ ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರ ಪಿ ನಂದೀಶ್ ರವರ ಕುಟುಂಬದವರಿಗೆ ತೊಂದರೆ ಕೊಡುವ ಸಲುವಾಗಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಒಟ್ಟು ಕುಟುಂಬದಲ್ಲಿ ವಾಸವಾಗಿಲ್ಲದೇ ಇದ್ದರೂ ಸಹ ಮತ್ತು ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.